ಶಿಗ್ಗಾಂವ್ ತಾಲ್ಲೂಕು ಹಳ್ಳಿಗಳ ಅರೆ ಮಲೆನಾಡು ಪ್ರದೇಶಗಳ ಬಗ್ಗೆ

584 (832) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕ್ ಪಶ್ಚಿಮ ಭಾಗದ 48 ಹಳ್ಳಿಗಳ ಅರೆ ಮಲೆನಾಡು ಪ್ರದೇಶಗಳ ಆಣೇವಾರಿಯನ್ನು ಯಾವ ಬೆಳೆಗಳ ಮೇಲೆ ಆಣೇವಾರಿಯನ್ನು ನಿರ್ಧಿಷ್ಟಪಡಿಸಲಾಗಿದೆ;

ಆ) 1990-91 ಹಾಗೂ 1991-92 ನೇ ಸಾಲಿನಲ್ಲಿ ಶಿಗ್ಗಾಂವ ತಾಲ್ಲೂಕಿನಲ್ಲಿ ಆಣೇವಾರಿಯನ್ನು ಯಾವ ವಿಧಾನದ ಮೇಲೆ ಮಾಡಲಾಗಿದೆ;

ಇ) ಅರೆ ಮಲೆನಾಡು ಪ್ರದೇಶದ ಹಳ್ಳಿಗಳಲ್ಲಿ ರೈತರು ಹತ್ತಿ, ಜೋಳ ಇನ್ನಿತರೆ ಬೆಳೆಗಳನ್ನು ಕೂಡಾ ಇತ್ತೀಚಿನ ವರ್ಷಗಳಲ್ಲಿ ಬೆಳೆಯುತ್ತಿದ್ದು ಅವುಗಳನ್ನು ಕೂಡಾ ಭತ್ತದ ಬೆಳೆಯ ಜೊತೆಗೆ ಸಾಮೂಹಿಕವಾಗಿ ಬೆಳೆಗಳ ಆಣೇವಾರಿಯನ್ನು ಸರಾಸರಿಯಾಗಿ ನಿರ್ಧಿಷ್ಟಪಡಿಸಲಾಗುವುದೆ;

ಈ) ಆಣೇವಾರಿ ಪದ್ಧತಿಯಲ್ಲಿ ಅಮೂಲಾಗ್ರ ಬದಲಾವಣೆಯಾಗುವುದು ಮತ್ತು ಯಾತ್ಯ ಪದ್ಧತಿ ಆಳವಡಿಸುವುದು ಸರ್ಕಾರದ ಗಮನದಲ್ಲಿದೆಯೇ ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಮುಖ್ಯ ಬೆಳೆಗಳಾದ ಭತ್ತ, ಹೈಬ್ರಿಡ್ ಜೋಳ ಮತ್ತು ನೆಲಗಡಲೆ ಇವುಗಳನ್ನು ಆಣೇವಾರಿಗೆ ನಿರ್ಧಿಷ್ಟಪಡಿಸಲಾಗಿದೆ.

ಆ) 1966ರ ಕರ್ನಾಟಕ ಭೂಕಂದಾಯ ನಿಯಮ 147 (1) (2)

ರಲ್ಲಿ ಸೂಚಿಸಿರುವ ವಿಧಾನದಂತೆ ಆಣೇವಾರಿಯನ್ನು ನಿರ್ಧಾರ ಮಾಡಲಾಗುವುದು.

ಇ) ಹೌದು

ಮುಖ್ಯ ಬೆಳೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.

ಈ) ಹೌದು

ಆಣೇವಾರಿಯನ್ನು ನಿರ್ಧರಿಸುವ ಸಲುವಾಗಿ ಪ್ಲಾಟ್‌ಗಳ ಮತ್ತು ಬೆಳೆಗಳ ಆಯ್ಕೆ ಮಾಡಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರು ನಿಗಧಿಪಡಿಸುವ ವೈಜ್ಞಾನಿಕ ರೀತಿಯನ್ನು ಅನುಸರಿಸಲು ಸರ್ಕಾರವು ಎಲ್ಲಾ ಕ್ಷೇತ್ರ ಸಿಬ್ಬಂದಿಯವರಿಗೆ ಸೂಕ್ತ ಸೂಚನೆಗಳನ್ನು ನೀಡಿದೆ ಮತ್ತು ಕೃಷಿ ಇಲಾಖೆಯವರು ರಾಷ್ಟ್ರೀಯ ಪ್ರಯೋಗ ಸಮೀಕ್ಷೆಯವರು ತಮ್ಮ ಪ್ರಾಯೋಗಿಕ ಕ್ಷೇತ್ರಗಳಿಗೆ ನಿರ್ಧರಿಸಿರುವಂತೆ ಬೆಳೆಕೊಯಿಲುಗಳನ್ನು ಈ ಆಧಾರದ ಮೇಲೆ ನಿಗಧಿ ಪಡಿಸಿ ಸಾಮಾನ್ಯ ಇಳುವರಿಯ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರಸ್ತುತ ಸಾಲುಗಳಿಗೆ ಸರಾಸರಿ ಇಳುವರಿಯನ್ನು ನಿರ್ಧರಿಸಲು ಸೂಚನೆಗಳನ್ನು ನೀಡಿದೆ.

ಕರ್ನಾಟಕ ಕರಾವಳಿಯಲ್ಲಿ ಮೀನುಗಾರಿಕೆ ಅಭಿವೃದ್ಧಿ

585 (875) ಜಿ. ಎಸ್ ಆಚಾರ್ (ಬೈಂದೂರು):- ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕರಾವಳಿಯಲ್ಲಿ ಈಗಿರುವ ಬಂದುರುಗಳಲ್ಲಿ ಮೀನುಗಾರಿಕೆ ಒತ್ತಡ ಜಾಸ್ತಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇನ್ನೂ ಹೆಚ್ಚಿನ ಚಿಕ್ಕ ಬಂದರು ಹಾಗೂ ತಂಗು ಕೇಂದ್ರಗಳನ್ನು ರಚಿಸುವ ಯೋಜನೆ ಇದೆಯೇ;

ಇ) ಇದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎ. ಎಂ. ಬೆಳ್ಳಿಯಪ್ಪ:- (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು)

ಅ) ಬಂದಿದೆ.

ಆ) ಇದೆ.

ಇ) ಮಂಗಳೂರು ಮೀನುಗಾರಿಕೆ ಬಂದರಿನ ನಿರ್ಮಾಣವು ನಡೆಯುತ್ತಿದೆ. ಮಲ್ಪೆ ಮೀನುಗಾರಿಕಾ ಬಂದರಿನ ಎರಡನೇ ಹಂತದ ಕಾಮಗಾರಿ ಕೆಲಸಗಳನ್ನು 92-93ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ. ಹನ್ನೊಂದು ಸಣ್ಣ ಬಂದರು ಇಳಿದಾಣಗಳ ನಿರ್ಮಾಣವನ್ನು 8ನೇ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಹಣಕಾಸಿನ ನೆರವಿನಿಂದ ಹಂತ ಹಂತವಾಗಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಪಟ್ಟಣಗೆರೆ ಗ್ರಾಮ ಪಂಚಾಯ್ತಿಯ ಸರ್ಕಾರಿ ಓಣಿ ಜಮೀನಿನ ವಿಸ್ತೀರ್ಣ

586(911) ಶ್ರೀ ಪಿ. ಸಿ. ಸಿದ್ದನಗೌಡ:- (ಕಲಘಟಗಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರಾಮ ಪಂಚಾಯಿತಿಯ ಸರ್ಕಾರಿ ಓಣಿ ಭೂಮಿಯ ವಿಸ್ತೀರ್ಣವೆಷ್ಟು?

ಆ) ಈ ಮೇಲ್ಕಂಡ ಭೂಮಿಯನ್ನು ಅಕ್ಕ ಪಕ್ಕದ ಭೂಮಾಲೀಕರು ಒತ್ತುವರಿ ಮಾಡಿ ಅತಿ ಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಭೂಮಿಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಸದರಿ ಗ್ರಾಮದ ವಸತಿಹೀನ ನಿರ್ಗತಿಕರಿಗೆ ಹಂಚಲು ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಕಂದಾಯ ಸಚಿವರು)

ಅ) ಎರಡು ಎಕರೆಗಳು

ಆ) -ಹೌದು-

ಇ) ಅನಧಿಕೃತ ಅತಿಕ್ರಮಣಗಳನ್ನು ತಕ್ಷಣವೇ ಒಕ್ಕಲೆಬ್ಬಿಸಿ ಸದರಿ ಸರ್ಕಾರಿ ಓಣಿಯನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಕಾದಿರಿಸಲಾಗುವುದು.

ರೇಡಿಯೋ ಕಾಲರ್‌ನಿಂದ ಸತ್ತ ಹುಲಿಗಳ ಸಂಖ್ಯೆ

587 (912) ಶ್ರೀ ಎಂ. ನಾರಾಯಣ ಸ್ವಾಮಿ:- (ಬೇತಮಂಗಲ) ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1990-91, 1991-92 ರ ಸಾಲಿನಲ್ಲಿ ಎಷ್ಟು ಹುಲಿ ಚಿರತೆಗಳು ಮರಣ ಹೊಂದಿವೆ?

ಆ) ಇವುಗಳು ಸಾಯಲು ಕಾರಣಗಳೇನು? ಇವುಗಳಲ್ಲಿ ರೇಡಿಯೋಕಾಲರ್‌ನಿಂದ ಸತ್ತ ಪ್ರಾಣಿಗಳೆಷ್ಟು?

ಇ) ರೇಡಿಯೋ ಕಾಲರ್ ತೊಡಿಸುವುದರಿಂದ ಹುಲಿ ಚಿರತೆಗಳು ಸಾವನ್ನಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದರೆ ಇನ್ನು ಮುಂದೆ ರೇಡಿಯೋ ಕಾಲರ್ ತೊಡಿಸುವುದನ್ನು ಸರ್ಕಾರ ನಿಲ್ಲಿಸುವುದೇ?

ಶ್ರೀ ಈ. ಟಿ. ಶಂಭುನಾಥ:- (ಅರಣ್ಯ ರಾಜ್ಯ ಸಚಿವರು)